ದಿನಾಂಕಃ 26 .03.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀಸವಾಲುಃ ಪ್ರತಿವಾದಿ ನಂಬರ 1 ರಿಂದ 6 ಪರ ಶ್ರೀ. ಬಿ. ಕೆ. ಜೆ ವಕೀಲರಿಂದಃ**

ನಾನು ಆಯುರ್ವೇದಿಕ ವೈದ್ಯಕೀಯದಲ್ಲಿ ಪದವಿ ಹೊಂದಿರುತ್ತೇನೆ. ನಾನು ವಿಜಯನಗರ ಜಿಲ್ಲೆಯ ಹೂವಿನಹಡಗಲಿಯಲ್ಲಿ ವಾಸವಾಗಿದ್ದೇನೆ. ಈಗ ಸುಮಾರು 03 ವರ್ಷಗಳಿಂದ ನಾನು ಅಲ್ಲಿ ವಾಸವಾಗಿದ್ದೇನೆ. ಅದಕ್ಕಿಂತ ಪೂರ್ವದಲ್ಲಿ ಸುಣಧೋಳಿಯಲ್ಲಿ ವಾಸವಾಗಿದ್ದೆನು. ಅಲ್ಲಿ ನಾನು 40 ವರ್ಷಗಳ ಕಾಲ ವಾಸವಾಗಿದ್ದೆನು.

ನಾವು ಒಟ್ಟು 06 ಜನ ಅಣ್ಣತಮ್ಮಂದಿರರು ಹಾಗೂ ಇಬ್ಬರು ಅಕ್ಕತಂಗಿಯರು ಇರುತ್ತೇವೆ. ಅವರೆಂದರೆ 1. ಶಿವಪುತ್ರ, 2. ಗುರುಪುತ್ರ, 3, ವಿಜಯಕುವಾರ, 4. ರುದ್ರಪ್ಪ, 5. ಬಾಳಪ್ಪಾ ಹಾಗೂ 6. ವಿರೂಪಾಕ್ಷ, 7. ಪದ್ಮಾವತಿ, 8. ಬಾಳವ್ವಾ. ಶಿವಪುತ್ರನು ಚಿತ್ರದುರ್ಗ ಜಿಲ್ಲೆಯ ಹೊಳಲಕೆರೆಯಲ್ಲಿ ಉಪನ್ಯಾಸಕನಾಗಿ ಸೇವೆ ಸಲ್ಲಿಸಿ ಈಗ ಸುಮಾರು 7-8 ವರ್ಷಗಳ ಹಿಂದೆ ನಿವೃತ್ತಿ ಹೊಂದಿರುತ್ತಾನೆ. ಆತ ಖಾಯಂ ತರೀಖವಾಗಿ ಚಿತ್ರದುರ್ಗ ಜಿಲ್ಲೆಯ ಹೊಳಲಕೆರೆಯಲ್ಲಿ ವಾಸವಾಗಿದ್ದಾನೆ. ಗುರುಪುತ್ರ ಇತನು ಗೋಕಾಕದ ಜೆ.ಎಸ್ .ಎಸ್ ಕಾಲೇಜಿನ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿ ಈಗ 20 ವರ್ಷಗಳ ಹಿಂದೆ

ನಿವೃತ್ತಿ ಹೊಂದಿರುತ್ತಾರೆ. ಆತನು 58 ವರ್ಷಗಳ ವಯಸ್ಸಿ ನವರೆಗೆ ಸೇವೆಯನ್ನು ಸಲ್ಲಿಸಿ , ನಿವೃತ್ತಿ ಹೊಂದಿರುತ್ತಾನೆ.

ರುದ್ರಪ್ಪ ಇತನು ಸಿವಿಲ್ ಇಂಜನೀಯರಿಂಗದಲ್ಲಿ ಡಿಪ್ಲೋಮಾ ಮಾಡಿಕೊಂಡಿದ್ದು, ಪುನಾದಲ್ಲಿ ಸುಮಾರು 20 ವರ್ಷಗಳಿಂದ ನೌಕರಿ ಮಾಡಿಕೊಂಡು ಅಲ್ಲಿಯೇ ವಾಸವಾಗಿರುತ್ತಾನೆ.

ಬಾಳಪ್ಪಾ ಇತನು ಗಡಹಿಂಗ್ಲಜನ ಹಾರ್ಟಿಕಲ್ಚರ್ ಕಾಲೇಜನಲ್ಲಿ ಉಪನ್ಯಾಸಕನಾಗಿ ಸೇವೆ ಸಲ್ಲಿಸಿ ಈಗ ಒಂದು ವರ್ಷದ ಹಿಂದೆ ನಿವೃತ್ತಿ ಹೊಂದಿರುತ್ತಾನೆ.

ನಮ್ಮ ಸಹೋದರಿ ಪದ್ಮಾವತಿಯ ಇವಳನ್ನು ಸನ್ 1980 ರಲ್ಲಿ ಮದುವೆ ಮಾಡಿಕೊಟ್ಟಿದ್ದು, ಅದೇ ರೀತಿ ಇನ್ನೊಬ್ಬಳು ಸಹೋದರಿ ಬಾಳವ್ವಾಳನ್ನು ಸನ್ 1986 ರಲ್ಲಿ ಮದುವೆ ಮಾಡಿಕೊಟ್ಟಿದ್ದು, ಅವಾಗಿನಿಂದ ಅವರು ತಮ್ಮ ತಮ್ಮ ಗಂಡನ ಮನೆಯಲ್ಲಿ ವಾಸವಾಗಿದ್ದಾರೆ. ಸಾಕ್ಷಿಯು ಮುಂದುವರೆದು ಬಾಳವ್ವಾ ಈಗ ಸುಮಾರು 8-10 ವರ್ಷಗಳ ಹಿಂದೆ ಮೃತಪಟ್ಟಿರುತ್ತಾಳೆ.

ವಿದ್ಯಾ ಇವಳು ನಮ್ಮ ಸಹೋದರಿ ಪದ್ಮಾವತಿಯ ಮಗಳು ಹಾಗೂ ನನ್ನ ತಮ್ಮ ವಿರೂಪಾಕ್ಷನ ಹೆಂಡತಿ ಇರುತ್ತಾಳೆ. ವಿರೂಪಾಕ್ಷ ಇತನು ಮೆಳವಂಕಿ ಗ್ರಾಮದ

ಸರಕಾರಿ ಪ್ರೌಢಶಾಲೆಯಲ್ಲಿ ಮುಖ್ಯೋಪಾಧ್ಯಾಯನಾಗಿ ಸೇವೆ ಸಲ್ಲಿಸಿ, 2016 ರಲ್ಲಿ ಅಪಘಾತದಲ್ಲಿ ಮೃತಪಟ್ಟಿರುತ್ತಾನೆ. ಆತನಿಗೆ ಸ್ನೇಹಾ ಹಾಗೂ ಪ್ರತೀಕ ಎಂಬ ಇಬ್ಬರು ಮಕ್ಕಳು ಇರುತ್ತಾರೆ. ಸದರಿ ಸ್ನೇಹಾ ಇವಳನ್ನು ಈ ಪ್ರಕರಣದಲ್ಲಿ ಪಕ್ಷಗಾರರನ್ನಾಗಿ ಸೇರಿಸಿರುವುದಿಲ್ಲ.

ನಮ್ಮ ಸಹೋದರಿ ಮೃತ ಬಾಳವ್ವಾ ಇವಳಿಗೆ ಇಬ್ಬರು ಹೆಣ್ಣುಮಕ್ಕಳು ಹಾಗೂ ಒಬ್ಬ ಗಂಡು ಮಗ ಇರುತ್ತಾನೆ. ಅವರೆಂದರೆ 1. ಸವಿತಾ, 2. ಶಿಲ್ಪಾ , 3. ಸತೀಶ ಇರುತ್ತಾರೆ. ಅವರನ್ನು ಈ ಪ್ರಕರಣದಲ್ಲಿ ಪಕ್ಷಗಾರರನ್ನಾಗಿ ಸೇರಿಸಿರುವುದಿಲ್ಲ. ಸದರಿ ಮೇಲೆ ಹೇಳಿದ ಬಾಳವ್ವನ ಮಕ್ಕಳು ಹಾಗೂ ವಿರೂಪಾಕ್ಷನ ಮಗಳಾದ ಸ್ನೇಹಾ ಇವರ ಬಗ್ಗೆ ವಕೀಲರಿಗೆ ಮಾಹಿತಿ ಕೊಟ್ಟಿರುವುದಿಲ್ಲ. ನಾನು ಅವರ ಜೊತೆ ಒಳ್ಳೆಯ ಸಂಬಂಧ ಹೊಂದಿರುತ್ತೇನೆ. ಸದರೀಯವರಿಗೂ ಹಾಗೂ ವಾದಿಗೂ ಸಂಬಂಧ ಸರಿ ಇರದೇ ಇರುವ ಕಾರಣ ಅವರನ್ನು ವಾದಿಯು ಪ್ರಸ್ತುತ ಪ್ರಕರಣದಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಆ ಕಾರಣಕ್ಕಾಗಿ ವಾದಿಯ ದಾವೆಯು ಕಾನೂನಿನಡಿಯಲ್ಲಿ ನಿಲ್ಲುವುದಿಲ್ಲ ಎಂದರೆ ಸರಿಯಲ್ಲ.

ನಾವು ಎಲ್ಲ ಸಹೋದರರು ವಿದ್ಯಾವಂತರು ಇದ್ದು, ಬೇರೆ ಬೇರೆ ಉದ್ಯೋಗ ಹಾಗೂ ನೌಕರಿಗಳನ್ನು ಮಾಡಿರುತ್ತೇವೆ ಎಂದರೆ ನಿಜ. ನಮ್ಮ ತಂದೆ ಬಸವಂತಪ್ಪ ಮಮದಾಪೂರದಲ್ಲಿ ವಾಸವಾಗಿದ್ದರು. ಅವರು ಸಹ ಸರಕಾರಿ ಶಾಲೆಯ

ಮುಖ್ಯೋಪಾಧ್ಯಾಯರಾಗಿ ಸೇವೆ ಸಲ್ಲಿಸಿದ್ದರು. ನಮ್ಮ ತಾಯಿ ಗೌರವ್ವ ಇವಳು ಸನ್ 1998 ರಲ್ಲಿ ಸುಣಧೋಳಿ ಗ್ರಾಮದಲ್ಲಿ ಮೃತಪಟ್ಟಿರುತ್ತಾಳೆ. ನಮ್ಮ ತಂದೆ ಸಂಪೂರ್ಣ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿರುತ್ತಾರೆ. ನಮ್ಮ ತಂದೆಯಾಗಲೀ ಅಥವಾ ನಾವಾಗಲೀ ಖುದ್ದಾಗಿ ಒಕ್ಕಲುತನ ಮಾಡಿರುವುದಿಲ್ಲ.

ಮುಂಚೆ ವಾದಿಯು ಒಬ್ಬನೇ 1 ರಿಂದ 6 ನೇ ಪ್ರತಿವಾದಿಯರ ವಿರುದ್ಧ ದಾವೆ ಸಲ್ಲಿಸಿದ್ದ ಎಂದರೆ ನಿಜ. ಸಾಕ್ಷಿ ಮುಂದುವರೆದು ನಮ್ಮನ್ನು ಕೇಳಿಕೊಂಡು ದಾವೆ ಹಾಕಿದ್ದ ಎಂದು ನುಡಿಯುತ್ತಾರೆ. ನಾವು ಸದರಿ ಪ್ರಕರಣದಲ್ಲಿ ವಾದಿಯರಾಗಿ ಸೇರ್ಪಡೆಯಾಗಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು ನಾವು ಬೇರೆ ಬೇರೆ ಸ್ಥಳಗಳಲ್ಲಿ ವಾಸವಾಗಿದ್ದೆವು ಎಂದು ನುಡಿಯುತ್ತಾರೆ.

ಪ್ರಸ್ತುತ ಪ್ರಕರಣದಲ್ಲಿ ದಿ. 03.02.2023 ರಂದು ವಾದಿ/ಪಿಡಬ್ಲುಃ1 ರವರನ್ನು 1 ರಿಂದ 6 ನೇ ಪ್ರತಿವಾದಿಯ ಪರ ವಕೀಲರು ಪಾಟೀ ಸವಾಲಿಗೆ ಒಳಪಡಿಸಿದ್ದು, ಸದರಿ ದಿನದಂದು ನಾನು ನ್ಯಾಯಾಲಯದಲ್ಲಿ ಹಾಜರಿದ್ದೆನು. ಸದರೀಯವರ ಪಾಟೀ ಸವಾಲಿನಲ್ಲಿ ನಮ್ಮನ್ನೆಲ್ಲರನ್ನು ಪಕ್ಷಗಾರರನ್ನಾಗಿ ಸೇರ್ಪಡೆ ಮಾಡದೇ ಇರುವ ಬಗ್ಗೆ ಒಪ್ಪಿಕೊಂಡಿದ್ದರಿಂದ , ನಂತರದಲ್ಲಿ ನಮ್ಮನ್ನು ಈ ಪ್ರಕರಣದಲ್ಲಿ ಮಧ್ಯಂತರ ಅರ್ಜಿ ಸಂಖ್ಯೆ 12ರ ಮೇಲೆ ಆದ ಆದೇಶದಂತೆ ಸೇರ್ಪಡೆ ಮಾಡಿರುತ್ತಾರೆಂದರೆ ನಿಜ. ನಮ್ಮಂತೆ ಮೇಲೆ ಹೇಳಿದ ಸ್ನೇಹಾ ಹಾಗೂ ಬಾಳವ್ವಳ ಮಕ್ಕಳನ್ನು ಪಕ್ಷಗಾರರನ್ನಾಗಿ

ಸೇರ್ಪಡೆ ಮಾಡಲು ತೊಂದರೆ ಇರುವುದಿಲ್ಲ ಎಂದರೆ ಸಾಕ್ಷಿಯು ನನಗೆ ಗೊತ್ತಾಗುವುದಿಲ್ಲ ಎಂದು ನುಡಿಯುತ್ತಾರೆ.

ನಮ್ಮ ತಂದೆ ಖಾಯಂ ತರೀಖವಾಗಿ ಮಮದಾಪೂರ ಗ್ರಾಮದಲ್ಲಿ ವಾಸವಾಗಿದ್ದರು. ದಾವಾಸ್ತಿಯು ತಪಸಿ ಗ್ರಾಮದಲ್ಲಿ ಇರುತ್ತದೆ. ದಾವಾಸ್ತಿ ಜಮೀನನ್ನು ಹೊರತುಪಡಿಸಿ ನಮಗೆ ಬೇರೆ ಜಮೀನುಗಳು ಇರುವುದಿಲ್ಲ. ದಾವಾಸ್ತಿಯು ಒಟ್ಟು 04 ಎಕರೆ 02 ಗುಂಟೆ ಜಮೀನು ಇರುತ್ತದೆ. ದಾವಾಸ್ತಿಯ ಜಮೀನಿನ ಸರ್ವೆ ನಂಬರ 37 ರಲ್ಲಿ ಒಟ್ಟು 15 ಎಕರೆ 15 ಗುಂಟೆ ಜಮೀನು ಇತ್ತು. ಸದರಿ ಜಮೀನಿನ ಪೈಕಿ ನಾಗನೂರು ಕುಟುಂಬದವರಿಗೆ 07 ಎಕರೆ 11 ಗುಂಟೆ, ದಳವಾಯಿ ಕುಟುಂಬದವರಿಗೆ 01 ಎಕರೆ 01 ಗುಂಟೆ, ಇನ್ನೊಂದು ಕುಟುಂಬದವರಿಗೆ 03 ಎಕರೆ 01 ಗುಂಟೆ ಸಂಬಂಧಿಸಿರುತ್ತವೆ. ಸದರಿ 07 ಎಕರೆ 11 ಗುಂಟೆ ಜಮೀನು ನಾಗನೂರು ಕುಟುಂಬದವರಿಗೆ ಹೇಗೆ ಬಂತು ಎಂದು ನನಗೆ ಗೊತ್ತಿಲ್ಲ. ಸದರಿ ಸರ್ವೆ ನಂಬರನ ಪೈಕಿ ನಮ್ಮ ದೊಡ್ಡಪ್ಪನಾದ ಈರಪ್ಪ ದುಂಡಪ್ಪ ನಾವಿ ಇವರು ತಮ್ಮ ಪಾಲಿನ 04 ಎಕರೆ 02 ಗುಂಟೆ ಜಮೀನನ್ನು ಮೇಲೆ ಹೇಳಿದ ದಳವಾಯಿ ಕುಟುಂಬದವರಿಗೆ 01 ಎಕರೆ 01 ಗುಂಟೆ ಹಾಗೂ ಇನ್ನೊಂದು ಕುಟುಂಬದವರಿಗೆ 03 ಎಕರೆ 01 ಗುಂಟೆ ಜಮೀನು ಮಾರಾಟ ಮಾಡಿರುತ್ತಾರೆ.

ದಾವಾಸ್ತಿಯ ಜಮೀನು ನಮ್ಮ ತಂದೆಗೆ ಅವರ ಸಹೋದರನಾದ ಈರಪ್ಪ ದುಂಡಪ್ಪ ನಾವಿ ಇವರಿಂದ ಭಕ್ಷಿಸ ಪತ್ರದ ಮೂಲಕ ಬಂದಿರುತ್ತದೆ. ಸದರಿ ಭಕ್ಷಿಸ ಪತ್ರವು 1958 ರಲ್ಲಿ ಆಗಿರುತ್ತದೆ. ನಮ್ಮ ತಂದೆ ಸನ್ 1975 ರಲ್ಲಿ ತೀರಿಕೊಂಡಿರುತ್ತಾರೆ. ಸನ್ 1958 ರಿಂದ 1975 ರವರೆಗೆ ದಾವಾಸ್ತಿ ಜಮೀನನ್ನು ಮಲ್ಲಪ್ಪ ಬೈರಪ್ಪ ವಾಳದ ಇವರು ಸ.ಕು. ನಾತೆಯಿಂದ ಸಾಗುವಳಿ ಮಾಡುತ್ತಿದ್ದರು. ಸನ್ 1975 ರಿಂದ 1988 ರವರೆಗೆ ನಮ್ಮ ತಾಯಿಯು ಪ್ರಲ್ಹಾದ ಚನ್ನಬಸಪ್ಪ ನಾವಿ ರವರ ಮೂಲಕ ಸಮಪಾಲು ನಾತೆಯಿಂದ ದಾವಾಸ್ತಿಯನ್ನು ಸಾಗುವಳಿ ಮಾಡಿಸುತ್ತಿದ್ದಳು. ಸದರಿ ಪ್ರಲ್ಹಾದ 2002 ರಲ್ಲಿ ಮೃತಪಟ್ಟಿರುತ್ತಾನೆ. ಆತನಿಗೆ ಒಬ್ಬ ಮಗ ಇರುವ ಬಗ್ಗೆ ಕೇಳಿರುತ್ತೇನೆ ಆದರೆ ನಿಖರವಾಗಿ ಮಾಹಿತಿ ಇರುವುದಿಲ್ಲ.

ಸದರೀ ಮೇಲೆ ಹೇಳಿದ ಪ್ರಲ್ಹಾದ ನಾವಿ ಇತನು ಭೂ ಸುಧಾರಣಾ ಕಾಯ್ದೆ ಯಡಿಯಲ್ಲಿ ದಾವಾಸ್ತಿಯನ್ನು ಮಂಜೂರು ಮಾಡಿಸಿಕೊಳ್ಳಲು ಅರ್ಜಿಯನ್ನು ಕೊಟ್ಟಿರುವುದಿಲ್ಲ. ದಾವಾಸ್ತಿಯನ್ನು ಸನ್ 1975 ರಿಂದ 1988 ರವರೆಗೆ ಪ್ರಲ್ಹಾದ ಇತನು ಸಾಗುವಳಿ ಮಾಡುತ್ತಿದ್ದ ಎಂದು ತೋರಿಸಲು ಬಾಯಿ ಹೇಳಿಕೆಯನ್ನು ಬಿಟ್ಟು ಯಾವುದೇ ದಾಖಲೆಗಳು ನಮ್ಮ ಬಳಿ ಇರುವುದಿಲ್ಲ. ಅದೇ ರೀತಿ ಸದರಿ ಪ್ರಲ್ಹಾದ ನ ಹೆಸರು ದಾವಾಸ್ತಿಯ ಸನ್ 1975 ರಿಂದ 1988 ರ ಉತಾರೆಗಳ

ವ್ಯವಸಾಯಗಾರರ ಕಾಲಂನಲ್ಲಿ ಇರುವುದಿಲ್ಲ. ಸನ್ 1975 ರಿಂದ 1988 ರವರೆಗೆ ದಾವಾಸ್ತಿಯ ಕಂದಾಯ ಪಾವತಿಯನ್ನು ನಾವಾಗಲೀ, ಸದರಿ ಪ್ರಲ್ಹಾದನಾಗಲೀ ಪಾವತಿಸಿರುವುದಿಲ್ಲ. ಅದೇ ರೀತಿ ಸದರಿ 1975 ರಿಂದ 1988 ರ ಅವಧಿಯಲ್ಲಿ ಸದರಿ ಪ್ರಲ್ಹಾದ ದಾವಾಸ್ತಿಯಲ್ಲಿ ಬೆಳೆದ ಜಮೀನನ್ನು ಮಾರಾಟ ಮಾಡಿದ ಬ ಗ್ಗೆಯಾಗಲೀ ಅಥವಾ ನಮಗೆ ಕಾಳು-ಕಡಿ ಕೊಟ್ಟ ಬಗ್ಗೆಯಾಗಲೀ ಯಾವುದೇ ರಸೀದಿಗಳು ಇರುವುದಿಲ್ಲ. ಸನ್ 1975 ರಿಂದ 1988 ರವರೆಗೆ ಸದರಿ ಪ್ರಲ್ಹಾದ ದಾವಾಸ್ತಿಯ ಜಮೀನನ್ನು ಸಾಗುವಳಿ ಮಾಡುತ್ತಿದ್ದ ವಿಷಯ ವಾದಿಗೆ ಗೊತ್ತಿತ್ತು. ಸದರಿ ಸಂಗತಿಯನ್ನು ನನ್ನ ತಕರಾರಿನಲ್ಲಾಗಲೀ ಅಥವಾ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿಯಾಗಲೀ ಹೇಳಿ ಬರೆಸಿರುವುದಿಲ್ಲ.

1 ನೇ ಪ್ರತಿವಾದಿಯ ಬಗ್ಗೆ ನನಗೆ ಗೊತ್ತಿರುತ್ತದೆ. ಆತನಿಗೆ 04 ಜನ ಮಕ್ಕಳು ಇರುತ್ತಾರೆ. ಅವರ ಹೆಸರುಗಳನ್ನು ನನಗೆ ಹೇಳಲು ಆಗುವುದಿಲ್ಲ. ಇವತ್ತಿನವರಗೊ ನಾನು ಅವರು ಯಾರು ಇರುತ್ತಾರೆ ಎನ್ನುವ ಬಗ್ಗೆ ವಿಚಾರಿಸಿ ತಿಳಿದುಕೊಂಡಿರುವುದಿಲ್ಲ. 2 ರಿಂದ 6 ನೇ ಪ್ರತಿವಾದಿಯರ ಹೆಸರುಗಳನ್ನು ಹೇಳಲು ನನಗೆ ಆಗುವುದಿಲ್ಲ. ವಾದಿಯು ಪ್ರಸ್ತುತ ದಾವೆಯನ್ನು ಹಾಕುವ ಕಾಲಕ್ಕೆ ನಾನು ಹಾಜರು ಇರಲಿಲ್ಲ. ವಾದಿಯು ಒಟ್ಟು 06 ಜನರ ಮೇಲೆ ದಾವೆ ಮಾಡಿದ್ದು, ಅವರ ಹೆಸರುಗಳನ್ನು ನನಗೆ ಹೇಳಲು ಅಗುವುದಿಲ್ಲ. ವಾದಿಯು ನಮ್ಮ ಜಮೀನನ್ನು

ಬಿಡಿಸಿಕೊಡುವಂತೆ ಪರಿಹಾರ ಕೇಳಿ ದಾವೆಯನ್ನು ಹಾಕಿರುತ್ತಾನೆ. 1 ರಿಂದ 6 ನೇ ಪ್ರತಿವಾದಿಯರು ಸಮಪಾಲಿನ ಆಧಾರದ ಮೇಲೆ ದಾವಾ ಜಮೀನನ್ನು ಸಾಗುವಳಿ ಮಾಡುತ್ತಿದ್ದಾರೆ. ವಾದಿಯು ಅವರಿಗೆ ಸಾಗುವಳಿ ಮಾಡಲು ಕೊಟ್ಟಿರುತ್ತಾನೆ. ಪ್ರತಿವಾದಿ 1 ರಿಂದ 6ರವರಗೆ ದಾವಾ ಜಮೀನನ್ನು ಸಾಗುವಳಿ ಮಾಡಲು ವಾದಿಯು ಕೊಡುವಾಗ ನಾವು ಹಾಜರು ಇರಲಿಲ್ಲ. ಆ ಬಗ್ಗೆ ಯಾವುದೇ ಲಿಖಿತ ಕರಾರು ಪತ್ರ ಆಗಿರುವುದಿಲ್ಲ, ಬಾಯಿ ಮಾತಿನ ಕರಾರು ಆಗಿರುತ್ತದೆ. ಸದರಿ ವ್ಯವಹಾರದಲ್ಲಿ ಯಾವುದೇ ಹಿರಿಯರು ಭಾಗಿಯಾಗಿರಲಿಲ್ಲ. ಸನ್ 2014 ರಲ್ಲಿ ವಾದಿಯು ದಾವಾ ಜಮೀನನ್ನು 1 ರಿಂದ 6 ನೇ ಪ್ರತಿವಾದಿಗಳಿಗೆ ಸಾಗುವಳಿ ಮಾಡಲು ಕೊಟ್ಟಿರುತ್ತಾನೆ. ಸದರಿ ಸಂಗತಿಯನ್ನು ವಾದಿಯು ಹೇಳಿದ ಮೇರೆಗೆ ನಾನು ಹೇಳುತ್ತಿದ್ದೇನೆಂದರೆ ಸಾಕ್ಷಿಯು ನನಗೂ ಸಹ ಗೊತ್ತಿರುತ್ತದೆಂದು ನುಡಿಯುತ್ತಾರೆ. ಸದರಿ ಸಾಗುವ ಳಿ ಮಾಡಲು ಕೊಟ್ಟ ವ್ಯವಹಾರ ಆದ ದಿನಾಂಕ, ತಿಂಗಳು ನನಗೆ ಹೇಳಲು ಆಗುವುದಿಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಸಮಯ ಕೋರಿದ್ದು, ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ ರೀತಿ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ

(ಮಹಾದೇವ ಕಾನಟ್ಟಿ)
2ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

ಸಾಕ್ಷಿಯ ಸಹಿ